ದಿ: 05.12.2017 OS 240. / 2014 PW-1

05.12.2017 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

*ಪಾಟೀ ಸವಾಲು : ಶ್ರೀ. ಎಂ.ಕೆ.ಎನ್ ( ೧ ರಿಂದ ೩ ನೇ ಪ್ರತಿವಾದಿಗಳ) ವಕೀಲರಿಂದ:*

*1. ಲಿಂಗೇಗೌಡರು ನನ್ನ ಪತಿಯ ತಂದೆ. ಲಿಂಗೇಗೌಡರಿಗೆ 3 ಜನ ಮಕ್ಕಳು ಅವರುಗಳು ಮೊಡ್ಡೆಲಿಂಗೇಗೌಡ ಮಂಚೇಗೌಡ ಹಾಗೂ ನನ್ನ ಗಂಡ ರಾಚೇಗೌಡ ಎಂದರೆ ಸರಿ. 1 ನೇ ಪ್ರತಿವಾದಿ ಮಂಚೇಗೌಡರ ಮಗ ಎಂದರೆ ಸರಿ.*

*2. ರಾಚೇಗೌಡ ಹಾಗೂ ಕರೀಗೌಡ ಹಾಗೂ ನನ್ನ ಮದುವೆ ಸುಮಾರು 45 ವರ್ಷಗಳ ಹಿಂದೆ ನೆರವೇರಿತು. ಮೊಡ್ಡೆಲಿಂಗೇಗೌಡ ಮಂಚೇಗೌಡ ಹಾಗೂ ಹಿಸ್ಸೆ ರಾಚೇಗೌಡ ರವರ ಮಧ್ಯ ಹಿಸ್ಸೆ ನಡೆದಿತ್ತ ಎಂದರೆ ನನಗೆ ಗೊತ್ತಿಲ್ಲ. ಲಿಂಗೇಗೌಡರ ಹೆಸರಿಗೆ ಆಸ್ತಿ ಇತ್ತು.*

*3. ಸರ್ವೆ ನಂಬರ್ 2/2 ಸ್ವತ್ತನ್ನು ಮಂಚೇಗೌಡರ ನಂತರ 1ನೇ ಪ್ರತಿವಾದಿಯ ಹೆಸರಿಗೆ ಬಂತು ಎಂದರೆ ಅದನ್ನು ನಾವು ಅದರ ಸ್ವಾಧೀನದಲ್ಲಿ ನಾವಿದ್ದೇವೆ. ಸರ್ವೆ ನಂಬರ್ 2/2 ರಲ್ಲಿ ನನ್ನ ಸ್ವಾಧೀನದಲ್ಲಿರುವ ಸ್ವತ್ತು 21 ಗುಂಟೆ ಜಮೀನು.*

*4. ಸದರಿ ದಾವೆಗೆ ದಾಖಲಾತಿಗಳನ್ನು ನನ್ನ ಸೊಸೆ ಒದಗಿಸಿಕೊಟ್ಟಿದ್ದಾರೆ. ನನ್ನ ಸ್ವಾಧೀನದಲ್ಲಿರುವ ಸ್ವತ್ತುಗಳು ಹಾಗೂ ಅದರ ವಿಸ್ತೀರ್ಣ ತಿಳಿದುಕೊಡಿದ್ದೇನಯೇ ಎಂದರೆ ಗೊತ್ತಗುವುದಿಲ್ಲ, ದಾವಾ ತಪಶೀಲು ಸ್ವತ್ತನ್ನು ನನ್ನ ಮಾವ ಪಂಚಾಯಿತ್ ಪಾರಿಕತ್ ಮುಖೇನ ನೀಡಿದ್ದಾರೆ. ಸದರಿ ಪಂಚಾಯಿತ್ ಪಾರಿಕತ್ ಅಡಿಯಲ್ಲಿ ಒದೇಗೌಡ ಹಾಗೂ ಪುಟ್ಟಸಿದ್ದೇಗೌಡ ( ನನ ಗಂಡನ ಸಹೋದರರು ) ರವರಿಗೊ ಸಹ ಹಿಸ್ಸೆ ನೀಡಿದ್ದರು. ಸದರಿ ಪಂಚಾಯಿತ್ ಪಾರಿಕತ್ ಆದ ವರ್ಷ ನನಗೆ ಗೊತ್ತಿಲ್ಲ. 1 ನೇ ಐಟಂ ಸ್ವತ್ತಿನ ಪೂರ್ವಕ್ಕೆ ಒದೇಶ ರವರಿಗೆ ಸೇರಿದ ಸ್ವತ್ತು ಪಶ್ಚಿಮಕ್ಕೆ ಒದೇಶ ರವರ ಹಿತ್ತಲು ಉತ್ತರಕ್ಕೆ ದಕ್ಷಿಣಕ್ಕೆ ನನಗೆ ಸೇರಿದ ಸ್ವತ್ತು.*

*5. 1 ನೇ ಪ್ರತಿವಾದಿಗೂ ಜಮೀನು ಇದೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಸೇರಿದ ಸ್ವತ್ತಿನ ಪಕ್ಕದಲ್ಲಿ ನಾವು ರೈತರು ಓಡಾಡಲು ಬಿಟ್ಟುಕೊಂಡಿರುವ ಒಂದು ರಸ್ತೆ ಇದೆ.*

ಮುಂದಿನ ಪಾಟೀ ಸವಾಲೀಗೆ ಸಮಯ ಕೋರಿದ್ದು ಸಮಯವನ್ನು ನೀಡಲಾಯಿತು.

ಮರು ವಿಚಾರಣೆ ಇಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)*

ಓ ಹೇ ಕೇ ಸ ಓ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಚನ್ನಪಟ್ಟಣ.